

ಡಾ.ಅ. ಶ್ರೀಧರ
ಮನೋವಿಜ್ಞಾನಿ

ಪೋಷಕರೇ, ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ, ಆತಂಕಗಳಿಗೆ ಮನೋವಿಜ್ಞಾನಿ ಡಾ.ಅ. ಶ್ರೀಧರ ಅವರು ಉತ್ತರಿಸುತ್ತಾರೆ.

ನನಗೆ ಇಬ್ಬರು ಹೆಣ್ಣು ಮಕ್ಕಳು. ದೊಡ್ಡವಳಿಗೆ 7 ವರ್ಷ, ಚಿಕ್ಕವಳಿಗೆ ಎರಡು ವರ್ಷ ತುಂಬಿವೆ. ಎರಡನೆಯವಳ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಲು ಇಷ್ಟಪಡುತ್ತೇನೆ. ಅವಳನ್ನು ಶಾಲೆಗೆ ಸೇರಿಸುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಹೆಸರುವಾಸಿಯಾದ ಶಾಲೆಗಳಿಂದ ಅರ್ಜಿಯನ್ನೂ ಪಡೆದಿದ್ದೇವೆ. ಅವಳ ವಯಸ್ಸಿಗೆ ಸರಿಯಾದ ಮಾನಸಿಕ ಮತ್ತು ಶರೀರದ ಬೆಳವಣಿಗೆ ಇದೆ. ಚೆನ್ನಾಗಿ ಮಾತಾಡುತ್ತಾಳೆ. ಅವಳಷ್ಟಕ್ಕೆ ಅವಳು ಇರಬಲ್ಲಳು ಎನ್ನುವ ವಿಶ್ವಾಸವೂ ನಮಗೆ ಇದೆ. ಅವಳ ಮಾನಸಿಕ ಶಕ್ತಿಗಳಿಗೆ ಸರಿಹೊಂದುವಂತಹ ಶಾಲೆಯನ್ನು ಗುರುತಿಸುವುದು ಹೇಗೆ? ಈ ಪ್ರಶ್ನೆ ಕೇಳುವ ಉದ್ದೇಶವೆಂದರೆ, ನಮ್ಮ ದೊಡ್ಡ ಮಗಳನ್ನು ಉತ್ತಮವಾದ ಪೂರ್ವಪ್ರಾಥಮಿಕ ಶಿಶುವಿಹಾರಕ್ಕೆ ತುಂಬಾ ಹಣ ತೆತ್ತು ಸೇರಿಸಿದ್ದೆವು. ಅವಳೂ ಸಹ ಚಿಕ್ಕ ವಯಸ್ಸಿನಲ್ಲಿಯೇ ಮಾತುಕತೆಗಳಲ್ಲಿ ಮುಂದಿದ್ದಳು. ಸದಾ ಲವಲವಿಕೆಯಿಂದ ಇದ್ದಂತಹ ಹುಡುಗಿ. ಆದರೆ, ಶಾಲೆಯಲ್ಲಿ ಅವಳ ಕಲಿಯುವ ಸಾಮರ್ಥ್ಯ ತುಂಬಾ ಕಡಿಮೆಯಾಗಿದೆ ಎನ್ನುವುದು ತಿಳಿದು ಬಂದಿದೆ. ಯಾವ ವಿಷಯದಲ್ಲೂ ಹೆಚ್ಚಾಗಿ ಅಂಕಗಳಿಸಿಲ್ಲ. ಹೊಡೆದು, ಬೈದು ಮಾಡಿದರೆ ಮಾತ್ರ ಕಲಿಯುತ್ತಾಳೆ. ಹೀಗಾಗಿ, ನಮ್ಮ ಎರಡನೆಯ ಮಗಳ ಬಗ್ಗೆ ಸ್ವಲ್ಪ ಎಚ್ಚರವಾಗಿ ಹೆಜ್ಜೆ ಇಡಬೇಕಾಗಿದೆ. ಆದುದರಿಂದ ಅವಳ ಭವಿಷ್ಯದ ಕಲಿಕೆಯ ಸಾಮರ್ಥ್ಯವನ್ನು ಈಗಲೇ ತಿಳಿದುಕೊಳ್ಳುವ ಆಸೆ. ನನ್ನ ಮಗಳಿಗೆ ಉತ್ತಮವಾದ ಶಿಕ್ಷಣವನ್ನು ಕೊಡಬಲ್ಲ ಶಾಲೆಯನ್ನು ಗುರುತಿಸುವುದು ಹೇಗೆ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಇದಲ್ಲದೆ, ಮನೆಯ ವಾತಾವರಣವು ಹೆಣ್ಣು ಮಕ್ಕಳ ಕಲಿಕೆ ಮತ್ತು ಮನಸ್ಸಿನ ಮೇಲೆ ನೇರ ಪರಿಣಾಮ ಬೀರುತ್ತದೆ ಎನ್ನುವ ಮಾತು ಕೇಳಿದ್ದೇನೆ. ಇದು ನಿಜವೇ?

–ಚಂಪಾವತಿ, ಬೆಂಗಳೂರು

ಶಾಲೆಯಲ್ಲಿ ಕಲಿಸುವ ಸರಳವಾದ ವಿಷಯಗಳನ್ನು ಸಮರ್ಪಕವಾಗಿ ಕಲಿಯುವುದಕ್ಕೆ ಬೇಕಾದಂತಹ ಸಾಮಾನ್ಯ ಸಾಮರ್ಥ್ಯ ಎಲ್ಲಾ ಆರೋಗ್ಯವಂತ ಮಕ್ಕಳಲ್ಲೂ ಇರುತ್ತದೆ. ಅಂದರೆ, ಹೇಳಿದ್ದನ್ನು ಕೇಳಿಸಿಕೊಂಡು ಮಾಡುವುದು, ಮಾಡಿ ತೋರಿಸಿದ್ದನ್ನು ನೋಡಿ ಕಲಿಯುವುದು ಮತ್ತು ಕಲಿತಿದ್ದನ್ನು ಇತರರ ಗಮನಕ್ಕೆ ತರುವಂತಹ ಗುಣಗಳು ಮಕ್ಕಳಲ್ಲಿ ಇರುತ್ತವೆ. ಆದರೆ, ಬೇಗ ಬೇಗ ಕಲಿಯಲಿ, ಹೆಚ್ಚು ಹೆಚ್ಚು ಕಲಿತು ಅಂಕಗಳನ್ನು ಗಳಿಸಲಿ ಎನ್ನುವಂತಹ ಪರಿಸರವನ್ನು ಇಂದು ಶಾಲೆ ಮತ್ತು ಮನೆಯ ವಾತಾವರಣ ಸೃಷ್ಟಿಸಿಬಿಟ್ಟಿವೆ. ಇಂತಹದೊಂದು ಸ್ವಭಾವ ನಿಮ್ಮಲ್ಲಿದ್ದರೇ, ದಯಮಾಡಿ ಬದಲಾಯಿಸಿಕೊಳ್ಳಿ. ಒಳ್ಳೆಯ ಶಾಲೆ ಯಾವುದು, ಕೆಟ್ಟ ಶಾಲೆ ಯಾವುದು ಎನ್ನುವುದನ್ನು ಗುರುತಿಸುವುದು ಸುಲಭವಲ್ಲ. ಬಹಳಷ್ಟು ಪೋಷಕರ ಮನಸ್ಸಿನಲ್ಲಿರುವ ವಿಷಯವೆಂದರೆ, ಶ್ರೀಮಂತರ ಮಕ್ಕಳು ಹೋಗುವ ಶಾಲೆ, ಅಥವಾ ಹೆಚ್ಚು ಹಣ ವಸೂಲಿ ಮಾಡುವ ಶಾಲೆಯಲ್ಲಿ ಒಳ್ಳೆಯ ಶಿಕ್ಷಣ ಸಿಗುತ್ತದೆ ಎನ್ನುವುದು. ಇದನ್ನು ಪ್ರತಿಷ್ಠೆಯ ಪ್ರಭಾವ ಎಂದೂ ಕರೆಯಬಹುದು. ಇನ್ನು, ನಿಮ್ಮ ಮೊದಲ ಮಗಳಲ್ಲಿ ಕಂಡು ಬಂದಿರುವ ಕಲಿಕೆಯ ರೀತಿಯೂ ಈ ಮಗುವಿನಲ್ಲೂ ಆಗುತ್ತದೆ ಎನ್ನುವ ಅನಿಸಿಕೆ ಸರಿ ಇರಲಾರದು. ಮೂರು ವರ್ಷದ ಮಗುವಿನ ಮಾನಸಿಕ ಸಾಮರ್ಥ್ಯಗಳ ಆಧಾರದ ಮೇಲೆ ನಂತರದ ಕಲಿಕೆಯ ಬಲವನ್ನು ತಿಳಿದುಕೊಳ್ಳಬಹುದು ಎನ್ನುವ ತರಾತುರಿ ಸದ್ಯಕ್ಕೆ ಬೇಡ. ನಿಮ್ಮ ಮನೆಗೆ ಹತ್ತಿರವಿರುವ ಶಾಲೆಗೆ ಕಳುಹಿಸುವುದು ಒಳ್ಳೆಯದು. ಆಟದ ಜೊತೆಗೆ ಪಾಠ ಎನ್ನುವಂತಹ ಶಾಲೆ ಕಂಡುಬಂದರೆ ಇನ್ನೂ ಉತ್ತಮ. ಎಲ್ಲ ಮಕ್ಕಳೂ ಒಂದೇ ವೇಗದಲ್ಲಿ ಎಲ್ಲ ವಿಷಯಗಳನ್ನು ಕಲಿಯುತ್ತಾರೆ ಎಂದು ಹೇಳಲಾಗದು. ಹೀಗಾಗಿ ಕಲಿಯ ಬೇಕಾಗಿರುವುದುನ್ನು ಸರಿಯಾಗಿ ಮತ್ತು ಸಮರ್ಪಕವಾಗಿ ಕಲಿಯುವುದನ್ನು ಉತ್ತೇಜಿಸುವ ವಾತಾವರಣ ಮನೆಯಲ್ಲಿ ಇದ್ದರಂತೂ ಇನ್ನೂ ಒಳ್ಳೆಯದೇ. ಮನೆಯ ವಾತಾವರಣವು ಮಕ್ಕಳ ಮೇಲಷ್ಟೇ ಅಲ್ಲ, ಹಿರಿಯರ ಮೇಲೂ ಪರಿಣಾಮ ಬೀರುತ್ತದೆ. ಮನಸ್ಸಿಗೆ ಹಿತವನ್ನು ಕೊಡುವಂತಹ ವಾತಾವರಣವನ್ನು ಕುಟುಂಬ ಸೃಷ್ಟಿಸಬಲ್ಲದು. ಅಂದರೆ, ಹಿರಿಯರ ಕೋಪ, ಆವೇಶ, ದುಶ್ಚಟಗಳು ಮಕ್ಕಳ ಭಾವಗಳ ಮೇಲಷ್ಟೇ ಅಲ್ಲದೆ ಕಲಿಕೆಯ ಮೇಲೂ ಉಂಟಾಗುತ್ತದೆ. ಅಂದರೆ, ಅಪ್ಪ ಅಮ್ಮ ಏರಿದ ದನಿಯಲ್ಲಿ ಕಿರುಚಾಡುತ್ತಿದ್ದರೆ , ಪಾಠ ಕಲಿಯುತ್ತಿರುವ ಮಗುವಿನ ಗಮನ ಕದಡದೇ ಇರಲು ಸಾಧ್ಯವೇ? ಹಾಗೆಯೇ, ಓದು, ಬರಿ ಎಂದು ಮೇಲಿಂದ ಮೇಲೆ ಹೇಳುವುದರ ಬದಲು ಮಗುವಿನೊಂದಿಗೆ ಕೂತು, ಓದಿಸುವ ಮತ್ತು ಬರೆಸುವ ವ್ಯವಧಾನ ಪೋಷಕರಲ್ಲಿ ಇದ್ದರೆ, ಮಕ್ಕಳ ಕಲಿಕೆ ಮತ್ತಷ್ಟು ಉತ್ತಮವಾಗಿರಬಲ್ಲದು. ಇನ್ನು ಹೆಣ್ಣು ಮಕ್ಕಳ ರೀತಿನೀತಿಗಳನ್ನು ಮನೆಯ ಹಿರಿಯರು ಹೆಚ್ಚಾಗಿಯೇ ಗಮನಿಸುವುದು ಅಥವಾ ನಿಯಂತ್ರಿಸುವುದು ಒಂದು ಸಂಪ್ರದಾಯವೇ ಆಗಿರುವುದರಿಂದ ಬಹಳಷ್ಟು ಹೆಣ್ಣು ಮಕ್ಕಳ ಕಲಿಕೆಯ ಶಕ್ತಿಗಳಿಗೆ ಅಡೆತಡೆಗಳಿವೆ ಎನ್ನುವ ಮಾತು ಕೂಡ ನಿಜ. ಸಣ್ಣವಯಸ್ಸಿನ ಮಕ್ಕಳ ಮನಸ್ಸಿಗೂ ಅರ್ಥವಾಗುವಂತಹ ಕಂದಾಚಾರಗಳಿಂದ ಪಾರಾಗದಿರುವ ಕುಟುಂಬಗಳು ಬೇಕಾದಷ್ಟು ಇವೆ. ನಿಮ್ಮ ಮನೆಯ ವಾತಾವರಣದಲ್ಲಿ ಇಂತಹ ಪರಿಸ್ಥಿತಿ ಇದ್ದ ಪಕ್ಷದಲ್ಲಿ ಬದಲಾಯಿಸುವುದರತ್ತ ಗಮನಹರಿಸಿ.

ನನಗೆ 23 ವರ್ಷದ ಮಗ ಮತ್ತು 20 ವರ್ಷದ ಮಗಳು ಇದ್ದಾರೆ. ಮಗ ಬಿಬಿಎಂ ಎರಡು ವರ್ಷ ಓದಿ ಬಿಟ್ಟು ಬಿಟ್ಟ. ನಂತರ ಡಿಪ್ಲೊಮೊ ಮಾಡಿ ಈಗ ಕಂಪ್ಯೂಟರ್ ಕಂಪೆನಿಯಲ್ಲಿ ಕೆಲಸದಲ್ಲಿದ್ದಾನೆ. ನನ್ನ ಮಗಳು ಎಂಬಿಎ ಮಾಡುತ್ತಿದ್ದಾಳೆ. ಆದರೆ, ಅವರಿಬ್ಬರಿಗೂ ಅನ್ಯೋನ್ಯತೆ ಒಂದು ಚೂರು ಇಲ್ಲ. ಇವರ ಹಗೆತನಕ್ಕೆ ಯಾವ ಎಲ್ಲೆಯೂ ಇಲ್ಲ. ಅವಳನ್ನು ಮನೆ ಬಿಟ್ಟು ಬೇಗ ಕಳುಹಿಸು ಎಂದು ಅವನ ಗಲಾಟೆ. ಅವಳು ಅವನನ್ನು ಈ ಕ್ಷಣದಿಂದ ಹೊರಹಾಕು ಎಂದು ರಂಪ ಮಾಡುತ್ತಾಳೆ. ನನ್ನ ಹೆಂಡತಿ ತೀರಿ ಸುಮಾರು ವರ್ಷಗಳು ಕಳೆದಿದೆ. ನಮ್ಮಮ್ಮನ ಸಹಾಯದಿಂದ ಈ ಮಕ್ಕಳನ್ನು ಸಾಕಿದೆ. ಇವತ್ತು ನಮ್ಮ ಮನೆ ಕುರುಕ್ಷೇತ್ರವೇ ಆಗಿದೆ. ಇವರ ಸಿಟ್ಟು, ಆಕ್ರೋಶಗಳನ್ನು ಎದುರಿಸಲಾರದಂತಹ ಸ್ಥಿತಿ ನನ್ನದು. ನನ್ನೊಂದಿಗೆ ಇಬ್ಬರೂ ಆತ್ಮೀಯವಾಗಿರುತ್ತಾರೆ. ಆದರೆ, ಒಬ್ಬರನ್ನೊಬ್ಬರು ನಾಶಮಾಡುವುದಕ್ಕೆ ಸದಾ ಸಿದ್ಧ. ಈ ಪರಿಸ್ಥಿತಿಯನ್ನು ಬದಲಾಯಿಸುವುದು ಹೇಗೆನ್ನುವುದೇ ತಿಳಿಯುತ್ತಿಲ್ಲ. ಇವರಿಬ್ಬರಲ್ಲಿರುವ ಹಗೆತನವನ್ನು ಕಡಿಮೆ ಮಾಡಲು ಏನಾದರೂ ಮಾರ್ಗವಿದ್ದರೆ ತಿಳಿಸಿಕೊಡಿ.

–ರಾಮಚಂದ್ರ, ನೆಲಮಂಗಲ

ಒಡಹುಟ್ಟಿದವರಾಗಿದ್ದು, ಉತ್ತಮ ಶಿಕ್ಷಣವನ್ನು ಪಡೆದಿರುವ ನಿಮ್ಮ ವಯಸ್ಕ ಮಕ್ಕಳ ವರ್ತನೆಗಳು ಮಾನಸಿಕ ಕಾರಣಗಳಿಂದಲೇ ಆಗಿದ್ದರೂ, ಶಿಕ್ಷಣ ಮತ್ತು ಸನ್ನಿವೇಶದ ಮೂಲಕ ಮಾನಸಿಕ ಗೊಂದಲಗಳಿಂದ ಹೊರಬರುವುದಕ್ಕೆ ಸಾಕಷ್ಟು ಮಾರ್ಗಗಳಿವೆ. ಆದರೆ, ಅವುಗಳನ್ನು ಬಯಸದೆ ಕೇವಲ ಒರಟುತನ, ಹಟಮಾರಿತನದ ಸ್ವಭಾವವನ್ನಷ್ಟೇ ಅನುಸರಿಸುತ್ತಿರುವುದು ದುರದೃಷ್ಟಕರ. ಬುದ್ಧಿವಾದದ ಎಲ್ಲಾ ವಿಧಾನಗಳನ್ನು ನೀವು ಅನುಸರಿಸಿ ವಿಫಲರಾಗಿದ್ದೀರಿ ಎನ್ನುವುದು ಬೇಸರದ ವಿಷಯವೇ. ಹೀಗಿದ್ದರೂ ನಿಮ್ಮ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುವುದು ಬೇಡ. ಈಗಾಗಲೇ, ನಿಮ್ಮ ಮಗ ಕೆಲಸಕ್ಕೆ ಸೇರಿಕೊಂಡಿದ್ದಾನೆ. ಸ್ವಂತ ಸಂಪಾದನೆ ಸಹ ಇದೆ. ಆದುದರಿಂದ ತಂಗಿಯಿಂದ ದೂರವಿರುವುದಕ್ಕೆ ಉತ್ತೇಜಿಸಿ. ಸ್ವಂತವಾಗಿ ವಾಸಮಾಡಿಕೊಂಡಿರುವಂತೆ ಹುರಿದುಂಬಿಸಿ. ಇಬ್ಬರಲ್ಲಿ ಒಬ್ಬರಾದರೂ ಈ ಸನ್ನಿವೇಶದಿಂದ ದೂರವಿರುವಂತೆ ಮಾಡುವುದರತ್ತವೇ ನಿಮ್ಮ ಪ್ರಯತ್ನಗಳು ಇರಲಿ.

ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ: ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್ 9880937122